ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೨೧ನೇ ಮಾರ್ಚಿ ೧೯೮೮ ಚೈತ್ರ, ೧; ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

೧೯೮೮-೮೯ನೇ ಆಯುವ್ಯಯ ಪತ್ರದ ಮಂಡನೆ

ಅಧ್ಯಕ್ಷರು.—ಈಗ ೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಆಯುವ್ಯಯ ಅಂದಾಜನ್ನು ಸಭೆಯ ಮುಂದೆ ಮಂಡಿಸುವುದು. ಈ ಸಂದರ್ಭದಲ್ಲಿ ಸಭೆಯ ಕಾರ್ಯಕಲಾಪಗಳನ್ನು ಚಿತ್ರೀಕರಣ ಮಾಡಲು ಅನುಮತಿ ಕೊಟ್ಟಿದ್ದೇನೆ.

ಶ್ರೀ ಜಿ. ಎಂ. ಕಾನಡೆ.—ಅವರು ಮುಖ್ಯ ಮಂತ್ರಿಗಳ ಹತ್ತಿರವೇ ಚಿತ್ರೀಕರಣ ನಡೆಸುತಿದ್ದಾರೆ. ಅವರು ನಮ್ಮ ಕಡೆಯೂ ಸಹ ನಡೆಸಲಿ.

ಅಧ್ಯಕ್ಷರು.—ಎಲ್ಲಾ ಕಡೆಯೂ ಚಿತ್ರೀಕರಣ ನಡೆಸುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಾನು ೧೯೮೮-೮೯ರ ಬಜೆಟ್ ಅಂದಾಜುಗಳನ್ನು ಮಂಡಿಸ ಬಯಸುತ್ತೇನೆ.

೨. ನಾನು ಇಡೀ ವರ್ಷದ ಬಜೆಟನ್ನು ಮಂಡಿಸುತ್ತಿದ್ದರೂ, ೧೯೮೮ರ ಜೂನ್ ೩೦ಕ್ಕೆ ಕೊನೆಗೊಳ್ಳುವ ಮೂರು ತಿಂಗಳ ಅವಧಿಗಾಗಿ ಲೇಖಾನುದಾನವನ್ನು ಕೋರಲಿದ್ದೇನೆ. ಸಂಪನ್ಮೂಲಗಳ ಪರಿಸ್ಥಿತಿಯ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಬಹುದೆಂಬ ನಿರೀಕ್ಷೆಯಿಂದ ನಾನು ಬಜೆಟನ್ನು ಮಂಡಿಸುವುದು ವಿಳಂಬವಾಯಿತು. ಕೇಂದ್ರ ಬಜೆಟನ್ನು ಮಂಡಿಸಿದ ನಂತರ ಇದರ ಚಿತ್ರ ಸ್ಪಷ್ಟವಾಗಬಹುದು ಹಾಗೂ ಕೇಂದ್ರ ಬಜೆಟ್ ಪ್ರಸ್ತಾವಗಳ ಕಾರಣದಿಂದಾಗಿ ನಮ್ಮ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು ಎಂದು ನಾನು ನಿರೀಕ್ಷಿಸಿದ್ದೆ. ಈ ಎರಡು ಅಂಶಗಳಲ್ಲೂ ನನಗೆ ನಿರಾಶೆಯಾಗಿದೆ ಎಂದು ತಿಳಿಸಲು ವಿಷಾದಿಸುತ್ತೇನೆ.

೩. ಕಳೆದ ಜನವರಿ ೧೦ ರಂದು ಜನತಾ ಸರ್ಕಾರವು ಅಧಿಕಾರಕ್ಕೆ ಬಂದು ಐದು ವರ್ಷಗಳು ಪೂರ್ಣವಾದವು. ಈ ಐದು ವರ್ಷಗಳಲ್ಲಿ ನಾವು ಅನೇಕ ಪರೀಕ್ಷೆಗಳು ಮತ್ತು ಸಂಕಷ್ಟಗಳನ್ನು ಎದುರಿಸಿದ್ದೇವೆ. ಹಾಗೆಯೇ ಯಶಸ್ಸು ಮತ್ತು ಸಾರ್ಥಕ್ಯಗಳೂ ನಮಗೆ ಒದಗಿವೆ. ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿದೆ ಎಂಬ ತೃಪ್ತಿ ನಮಗಿದ್ದರೂ, ಬರಗಾಲವು ರಾಜ್ಯವನ್ನು ಕಾಡದಿದ್ದಲ್ಲಿ ನಾವು ಇನ್ನೂ ಉತ್ತಮ ಸಾಧನೆಯನ್ನು ಮಾಡಬಹುದಾಗಿತ್ತು ಎಂಬ ಭಾವನೆ ನಮ್ಮಲ್ಲಿದೆ. ಈ ಐದು ವರ್ಷಗಳಲ್ಲಿ ಸರ್ಕಾರವು, ತಾನು ಚುನಾವಣಾ ಕಾಲದಲ್ಲಿ ನೀಡಿದ್ದ ಬಹುತೇಕ ಆಶ್ವಾಸನೆಗಳನ್ನು ಪೂರೈಸಿದೆ. ಅನೇಕ ಹೊಸ ಹಾಗೂ ನವನವೀನ ಯೋಜನೆಗಳನ್ನು ನಾವು ಪ್ರಾರಂಭಿಸಿದ್ದು, ಆ ಬಗ್ಗೆ ನ್ಯಾಯವಾಗಿಯೇ ನಾವು ಹೆಮ್ಮೆಪಡಬಹುದಾಗಿದೆ. ಈ ಯೋಜನೆಗಳನ್ನು ಮಾದರಿಯನ್ನಾಗಿರಿಸಿ ಕೊಳ್ಳಬೇಕೆಂದು ಭಾರತಸರ್ಕಾರ ಹಾಗೂ ಯೋಜನೆ ಆಯೋಗದವರು ಇತರರಿಗೆ ಶಿಫಾರಸು ಮಾಡಿದ್ದಾರೆ.

ನಾವು ವರ್ಷಗಳ ಹಿಂದೆಯೇ ಆರಂಭಿಸಿದ್ದ ಕೆಲವು ಕಾರ್ಯಕ್ರಮಗಳನ್ನು ೧೯೮೮-೮೯ರ ಕೇಂದ್ರ ಬಜೆಟಿನಲ್ಲಿ ಸೇರಿಸಲಾಗಿದೆ. ಪ್ರತಿಕೂಲ ಪರಿಸ್ಥಿತಿ ಇದ್ದಾಗ್ಯೂ, ಹಲವಾರು ಕ್ಷೇತ್ರಗಳಲ್ಲಿ ನಮ್ಮ ಕಾರ್ಯಸಾಧನೆ ಅತ್ಯುತ್ತಮವಾಗಿದೆ. ಈ ಸಂದರ್ಭದಲ್ಲಿ, ನಾನು ರಾಜ್ಯದ ಜನತೆಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಜನತೆಯ ಬೆಂಬಲ, ಸಹಕಾರಗಳು ದೊರೆಯದೆ ಇದ್ದಲ್ಲಿ, ನಾವು ಈ ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ.

೪. ಸರ್ಕಾರಿಯಾ ಆಯೋಗದ ಶಿಫಾರಸುಗಳ ಪೈಕಿ, ಕನಿಷ್ಠಪಕ್ಷ ಕೆಲವು ಶಿಫಾರಸುಗಳ ಬಗ್ಗೆಯಾದರೂ, ಕೇಂದ್ರ ಸರ್ಕಾರ ತನ್ನ ನಿರ್ಧಾರಗಳನ್ನು ಪ್ರಕಟಿಸಬಹುದೆಂದು ನಾವು ನಿರೀಕ್ಷಿಸಿದ್ದೆವು. ಅಲ್ಲದೆ, ನಮ್ಮ ರಾಷ್ಟ್ರದ ಇಂದಿನ ಮಬ್ಬುಗವಿದ ಹಣಕಾಸು ಪರಿಸ್ಥಿತಿಯನ್ನು ದೃಷ್ಟಿಯಲ್ಲಿರಿಸಿ, ಕೇಂದ್ರ ಬಜೆಟ್ ಕೆಲವೊಂದು ತೀವ್ರ ಸ್ವರೂಪದ ಪರಿಹಾರಗಳನ್ನು ಒದಗಿಸಬಹುದೆಂದೂ ನಾವು ನಿರೀಕ್ಷಿಸಿದ್ದೆವು. ಈ ಎಲ್ಲ ಆಸೆ ಆಕಾಂಕ್ಷೆಗಳು ಹುಸಿಯಾದುವು. ಸಂಪನ್ಮೂಲಗಳ ವರ್ಗಾವಣೆಯ ಮೂಲಕ ರಾಜ್ಯಗಳಿಗೆ ಕೆಲವೊಂದು ಹೆಚ್ಚುವರಿ ಸಹಾಯ ದೊರೆಯುವುದರ ಬದಲಾಗಿ, ಕೇಂದ್ರ ಬಜೆಟ್ ಪ್ರಸ್ತಾವಗಳಿಂದ ವಾಸ್ತವವಾಗಿ ಈಗಿರುವ ಸಂಪನ್ಮೂಲಗಳೇ ಮತ್ತಷ್ಟು ಹ್ರಾಸವಾಗಿವೆ.

೫. ರಾಜಸ್ವವನ್ನು ಕುರಿತಂತೆ, ಕೇಂದ್ರ ಹಣಕಾಸು ಸಚಿವರು ರಾಜ್ಯದ ಹಣಕಾಸು ಸಂಪನ್ಮೂಲಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಕೆಲವು ಪ್ರಸ್ತಾವಗಳನ್ನು ಮುಂದಿಸಿದ್ದಾರೆ. ಅವುಗಳಲ್ಲಿ ಕೆಲವು ಈ ರೀತಿ ಇವೆ.—

(i) ಎಲ್ಲ ಸಂಪತ್ತು ತೆರಿಗೆದಾರರಿಗೆ ಅನ್ವಯವಾಗುವಂತೆ, ಸಂಪತ್ತು ವರ್ಗಾವಣೆಯ ಮೇಲೆ ತೆರಿಗೆ ವಿಧಿಸುವ ಕೇಂದ್ರ ಸರ್ಕಾರದ ತೀರ್ಮಾನ. ಇದು, ಹಿಂದೆ ಇದ್ದ ಸಂಪತ್ತು ಶುಲ್ಕವನ್ನು ಪರೋಕ್ಷವಾಗಿ ಮತ್ತೆ ವಿಧಿಸುವ ಕ್ರಮವಾಗಿದೆ. ಈ ಹೊಸ ತೆರಿಗೆಯಿಂದ ಬರುವ ಆದಾಯ ರಾಜ್ಯಗಳಿಗೆ ಹಂಚಿಕೆಯಾಗುವುದಿಲ್ಲ ; ಮತ್ತು

(ii) ಮದ್ಯ ಹಾಗೂ ಅರಣ್ಯ ಕಾಂಟ್ರಾಕ್ಟುಗಳಂಥ ಕೆಲವು ವೃತ್ತಿಗಳಲ್ಲಿ ನಿರತರಾಗಿರುವ ವ್ಯಕ್ತಿಗಳು, ಸರಕುಗಳನ್ನು ಖರೀದಿಸುವಾಗಲೇ ಸಂದಾಯ ಮಾಡಬೇಕಾದ ತೆರಿಗೆಯನ್ನು ''ಸಮಂಜಸ ನಿಗದಿತ ಶೇಕಡವಾರು'' ದರದಲ್ಲಿ ಮೂಲದಲ್ಲೇ ಪಾವತಿ ಮಾಡುವ ಸಲುವಾಗಿ ಅವರ ವರಮಾನವನ್ನು ನಿರ್ಧರಿಸುವುದು ಎಂಬ ಕೇಂದ್ರ ಹಣಕಾಸು ಸಚಿವರ ಪ್ರಸ್ತಾವ. ೧೯೮೮ರ ಹಣಕಾಸು ವಿಧೇಯಕವು, ಈ ಕ್ರಮವನ್ನು ಕಾರ್ಯಗತಗೊಳಿಸಲು, ಪ್ರಕರಣ ೪೪ ಎಸಿ ಮತ್ತು ೨೦೬ ಸಿ ಈ ಎರಡು ಹೊಸ ಪ್ರಕರಣಗಳನ್ನು ಕಲ್ಪಿಸುವಂತೆ, ಆದಾಯ ತೆರಿಗೆ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ತರಲು ಪ್ರಸ್ತಾವಿಸಿದೆ. ಈ ಎರಡು ತಿದ್ದುಪಡಿಗಳನ್ನು ಕಾನೂನುಗಳನ್ನಾಗಿ ಜಾರಿಗೆ ತಂದರೆ, ರಾಜ್ಯದ ಹಣಕಾಸಿನ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಉಂಟಾಗುವುದು. ರಾಜ್ಯ ಅಬ್ಕಾರಿಯಿಂದ ನಾವು ಗಣನೀಯ ಪ್ರಮಾಣದ ಆದಾಯವನ್ನು ಪಡೆಯುತ್ತಿದ್ದೇವೆ ಎಂಬುದು ಮಾನ್ಯ ಸದಸ್ಯರಿಗೆಲ್ಲ ತಿಳಿದಿದೆ. ಈ ತಿದ್ದುಪಡಿಗಳ ಪರಿಣಾಮವೆಂದರೆ, ಆದಾಯ ತೆರಿಗೆ ಅಧಿನಿಯಮದ ಉದ್ದೇಶಿತ ೨೦೬ಸಿ (೧) ಪ್ರಕರಣದ ಮೇರೆಗೆ ವಿಧಿಸಲಾದ ಆದಾಯ ತೆರಿಗೆಯನ್ನು ಕಾಂಟ್ರಾಕ್ಟರುಗಳಿಂದ ಮೂಲದಲ್ಲಿಯೇ ವಸೂಲು ಮಾಡಲು ರಾಜ್ಯ ಸರ್ಕಾರವು ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಉಪಬಂಧಗಳ ಸಂವಿಧಾನ ಸಮಂಜಸತೆಯ ವಿಷಯದಲ್ಲೇ ಸಂದೇಹವಿದೆ. ಈ ರೀತಿಯಲ್ಲಿ ಆದಾಯ ತೆರಿಗೆಯನ್ನು ವಸೂಲಿ ಮಾಡುವುದರಿಂದ ನಮ್ಮ ಅಬ್ಕಾರಿ ಮತ್ತು ಅರಣ್ಯ ವರಮಾನಗಳು ಗಣನೀಯವಾಗಿ ತಗ್ಗುತ್ತವೆ.

೬. ೧೯೮೮-೮೯ರ ಕೇಂದ್ರ ಬಜೆಟಿನಿಂದ ಕೇಂದ್ರ ಮತ್ತು ರಾಜ್ಯಗಳ ನಡುವೆ ಹೊಸ ತೆರಿಗೆ ಆದಾಯಗಳನ್ನು ಹಂಚಿಕೊಳ್ಳುವ ಕ್ರಮವನ್ನು ಈ ಕೆಳಕಂಡ ಕೋಷ್ಠಕದಲ್ಲಿ ತೋರಿಸಲಾಗಿದೆ.—

	ಕೋಟಿ ರೂಪಾಯಿಗಳಲ್ಲಿ		
	ಕೇಂದ್ರ	ರಾಜ್ಯ	ಒಟ್ಟು
ಕಾರ್ಪೊರೇಷನ್ ತೆರಿಗೆ	೪೯	—	೪೯
ಆದಾಯ ತೆರಿಗೆ	೧೦೪	೯೪	೧೦
ಸೀಮಾ ಶುಲ್ಕ	೩೦೭	—	೩೦೭
ಅಬ್ಕಾರಿ ಶುಲ್ಕಗಳು	೧೧೭	೧೨೨	೨೩೯
ಇತರೆ	೧೦	—	೧೦
ಒಟ್ಟು	೫೮೭	೨೮	೬೧೫

ಈ ಅಂಕಿ ಅಂಶಗಳು ಸ್ವಯಂ ಸ್ಪಷ್ಟವಾಗಿವೆ, ೬೧೫ ಕೋಟಿ ರೂಪಾಯಿ ಒಟ್ಟು ನಿವ್ವಳ ತೆರಿಗೆ ಆದಾಯದ ಪೈಕಿ, ಕೇಂದ್ರದ ಪಾಲು ೫೮೭ ಕೋಟಿ ರೂಪಾಯಿ ಮತ್ತು ಒಟ್ಟಿಗೆ ಎಲ್ಲ ರಾಜ್ಯಗಳಿಗೂ ಸೇರಿ ದೊರೆಯುವ ಅತ್ಯಲ್ಪ ಮೊಬಲಗು ಎಂದರೆ ೨೮ ಕೋಟಿ ರೂಪಾಯಿ. ರಾಜ್ಯಗಳಿಗೆ ಬರುವ ಆದಾಯ ತೆರಿಗೆ ಪಾಲು ೯೪ ಕೋಟಿ ರೂಪಾಯಿಗಳಷ್ಟು ಕಡಿಮೆಯಾಗುವುದೆಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

೭. ಕೇಂದ್ರ ಬಜೆಟಿನಲ್ಲಿ, ಹಲವಾರು ರಿಯಾಯಿತಿ ಮತ್ತು ಪರಿಹಾರಗಳನ್ನು ಘೋಷಿಸಲಾಗಿದೆ. ಇದು, ರಾಜ್ಯ ಸರ್ಕಾರಗಳ ಹಿತಕ್ಕೆ ಬಾಧಕ. ಮಾನ್ಯ ಸದಸ್ಯರ ಮಾಹಿತಿಗಾಗಿ ನಾನು ಇದನ್ನು ವಿವರಿಸಬಯಸುತ್ತೇನೆ. ನೇರ ತೆರಿಗೆಗಳ ಕ್ಷೇತ್ರದಲ್ಲಿ ಆದಾಯ ತೆರಿಗೆ ಮತ್ತು ಸಂಪತ್ತು ತೆರಿಗೆಯ ಮೇಲೆ ಅಧಿಭಾರ ವಿಧಿಸುವುದನ್ನು ಮುಂದುವರಿಸಲಾಗಿದೆ. ಇದರಲ್ಲಿ ರಾಜ್ಯಗಳಿಗೆ ಯಾವುದೇ ಪಾಲು ಸಿಗುವುದಿಲ್ಲ. ಈ ಕ್ರಮದಿಂದ ಕೇಂದ್ರ ಸರ್ಕಾರಕ್ಕೆ ೨೬೦ ಕೋಟಿ ರೂಪಾಯಿ ಆದಾಯವಾಗುತ್ತದೆ. ನೇರ ತೆರಿಗೆಗಳಲ್ಲಿನ ರಿಯಾಯಿತಿಯಿಂದಾಗಿ ರಾಜ್ಯಗಳ ವರಮಾನ ತೆರಿಗೆ ಪಾಲಿನಲ್ಲಿ ೯೪ ಕೋಟಿ ರೂಪಾಯಿ ಇಳಿತವುಂಟಾಗಿದೆ. ಇದು ರಾಜ್ಯಗಳಿಗೆ ಆಗುವ ನೇರ ನಷ್ಟ. ಅದೇ ರೀತಿ ಇನ್ನೂ ಹೆಚ್ಚು ತೆರಿಗೆ ವಿಧಿಸುವಿಕೆಯಿಂದ ಬರುವ ಒಟ್ಟು ನಿವ್ವಳ ಆದಾಯ ೫೪೫.೪೯ ಕೋಟಿ ರೂಪಾಯಿಯ ಪೈಕಿ, ಕೇಂದ್ರದ ಪಾಲು ೪೨೩.೫೪ ಕೋಟಿ ರೂಪಾಯಿ ಮತ್ತು ರಾಜ್ಯಗಳ ಪಾಲ ೧೨೨.೧೫ ಕೋಟಿ ರೂಪಾಯಿ. ರಾಜ್ಯಗಳು ಯಾವ ರೀತಿಯ ಲ್ಲಿ ತಮ್ಮ ನ್ಯಾಯಸಮ್ಮತ ತೆರಿಗೆ ಪಾಲಿನಿಂದ ವಂಚಿತವಾಗಿವೆ ಎಂಬುದನ್ನು ತಿಳಿಸಲು ಈ ಮಾಹಿತಿಯನ್ನು ನಾನು ನೀಡಿದ್ದೇನೆ. ಕೊಡಲಾದ ಹಲವಾರು ರಿಯಾಯಿತಿಗಳಿಂದ ತನಗೆ ಉಂಟಾಗುವ ನಷ್ಟವನ್ನು ತುಂಬಿಕೊಳ್ಳುವ ಮತ್ತು ಎಲ್ಲ ರಾಜಸ್ವವನ್ನೂ ತನ್ನ ಪಾಲಿಗೇ ಉಳಿಯಬೇಕೆನ್ನುವ ಉದ್ದೇಶದಿಂದ ಕೇಂದ್ರ ಸರ್ಕಾರವು, ವಿವಿಧ ಹೆಸರುಗಳಲ್ಲಿ ಮತ್ತು ರೀತಿಗಳಲ್ಲಿ ಇನ್ನೂ ಹೆಚ್ಚಿನ ತೆರಿಗೆಗಳನ್ನು ವಿಧಿಸಿದೆ. ಈ ಕ್ರಮವು, ಸಂವಿಧಾನದ ಉಪಬಂಧಗಳನ್ನು ಮತ್ತು ವಿತ್ತ ಆಯೋಗದ ಶಿಫಾರಸುಗಳನ್ನು ಕಡೆಗಣಿಸಿ ಮಾಡಿದ ವಂಚನೆ ಮತ್ತು ಕುಟಿಲೋಪಾಯವಲ್ಲದೆ ಬೇರೇನೂ ಅಲ್ಲ. ಕೇಂದ್ರದ ಈ ಬಜೆಟಿನಿಂದ ರಾಜ್ಯಕೆ ಯಾವುದೇ ಪ್ರಯೋಜನ ಇಲ್ಲದಿರುವುದು ದುರದೃಷ್ಟಕರ. ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನಾದರೂ ಕೇಂದ್ರ ಸರ್ಕಾರವು ಅಂಗೀಕರಿಸಿದ್ದರೆ, ರಾಜ್ಯಗಳಿಗೆ ಕೆಲವು ಪರಿಹಾರಗಳು ದೊರೆಯುತ್ತಿದ್ದವು.

೮. ಸರ್ಕಾರಿಯಾ ಆಯೋಗವು ಅಕ್ಟೋಬರ್ ೧೯೮೭ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಕೇಂದ್ರ-ರಾಜ್ಯ ಹಣಕಾಸು ಸಂಬಂಧಗಳ ಬಗೆಗಿನ ಶಿಫಾರಸುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು, ಕೊನೇಪಕ್ಷ ಇಷ್ಟರೊಳಗಾಗಿ ಕ್ರಮ ಕೈಗೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆ ಸುಳ್ಳಾಗಿದೆ.

೯. ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಯನ್ನು ತರುವ ಮೂಲಕ ಕಾರ್ಪೋರೇಷನ್ ತೆರಿಗೆಯ ನಿವ್ವಳ ಉತ್ಪತ್ತಿಯನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವಂತೆ ಮಾಡಬಹುದೆಂದು ಆಯೋಗವು ಶಿಫಾರಸು ಮಾಡಿದೆ. ಈ ಕ್ರಮದಿಂದಾಗಿ ಹಣದ ವರ್ಗಾವಣೆಗೆ ವಿಸ್ತೃತ ಅವಕಾಶ ಕಲ್ಪಿಸಿಕೊಟ್ಟಂತಾಗುವುದೆಂದು, ಮತ್ತು ಹೀಗೆ ಮಾಡುವುದರಿಂದ ಭವಿಷ್ಯತ್ತಿನಲ್ಲಿ ರಾಜ್ಯಗಳ ಆದಾಯದಲ್ಲಿ ಬಹಳಷ್ಟು ಸ್ಥಿರತೆ ಮತ್ತು ಹಣಕಾಸಿನ ಲಭ್ಯತೆಯ ಪೂರ್ವ ಅರಿವು ಉಂಟಾಗುವುದೆಂದು ಹೇಳಿದ್ದಾರೆ.

೧೦. ಸುಮಾರು ಐದು ವರ್ಷಗಳು ಗತಿಸಿದರೂ, ರವಾನೆ ತೆರಿಗೆ ವಿಧಿಸಲು ಸಾಧ್ಯವಾಗುವಂತೆ ಸಂವಿಧಾನದ ಉದ್ದೇಶಗಳನ್ನು ಜಾರಿಗೆ ತರಲು, ಯಾವುದೇ ಶಾಸನವನ್ನು ತಂದಿಲ್ಲವೆಂಬ ಅಂಶವನ್ನು ಒತ್ತಿ ಹೇಳಿ, ಕೇಂದ್ರ ಸರ್ಕಾರವು ಮತ್ತಷ್ಟು ವಿಳಂಬ ಮಾಡದೆ, ಈ ಬಗ್ಗೆ ಸೂಕ್ತ ಶಾಸನವನ್ನು ತರಬೇಕೆಂದು ಆಯೋಗವು ಅಭಿಪ್ರಾಯ ಪಟ್ಟಿದೆ. ಇದು ಕಳೆದ ಅನೇಕ ವರ್ಷಗಳಿಂದ ನಾವು ತಾಳಿದ ನಿಲುವನ್ನು ಸಮರ್ಥಿಸುತ್ತದೆ.

೧೧. ಕೇಂದ್ರ ಮತ್ತು ರಾಜ್ಯಗಳ ಹಣಕಾಸು ಸಂಬಂಧಗಳಿಗೆ ನೇರ ಸಂಬಂಧವುಳ್ಳ, ಆಯೋಗದ ಅನೇಕ ಇತರ ಶಿಫಾರಸುಗಳಿವೆ. ಈ ಶಿಫಾರಸುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಕೇಂದ್ರ ಸರ್ಕಾರ ಏನೂ ನಿರ್ಧಾರ ತೆಗೆದುಕೊಳ್ಳದೆ ಇರುವುದು, ರಾಜ್ಯಗಳ ಹಣಕಾಸು ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡಿದೆ.

೧೨. ಹಣಕಾಸು ಸಚಿವರು, ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಸ್ಪಷ್ಟವಾಗಿ ಬರುವಂತಹ, ಅನೇಕ ಯೋಜನೆಗಳನ್ನು ಕೇಂದ್ರ ಬಜೆಟಿನಲ್ಲಿ ಪ್ರಕಟಿಸಿರುತ್ತಾರೆ. ರಾಜ್ಯ ಸರ್ಕಾರದವರು ಈಗಾಗಲೇ ಕಾರ್ಯಗತಗೊಳಿಸುತ್ತಿರುವ ಅಥವಾ ಕಾರ್ಯಗತಗೊಳಿಸುವ ನಿರೀಕ್ಷೆ ಇರುವ ಯೋಜನೆಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳುವುದು ಅಪೇಕ್ಷಣೀಯವಲ್ಲ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಕೇಂದ್ರ ಸರ್ಕಾರ ಈಗ ಕಲ್ಪಿಸಿರುವ ''ಜಲಧಾರಾ'' ಮತ್ತು ''ಕುಟೀರ ಜ್ಯೋತಿ'' ಗಳಂಥ ಅನೇಕ ಯೋಜನೆಗಳನ್ನು ನಮ್ಮ ಸರ್ಕಾರ ಈಗಾಗಲೇ ಅನುಷ್ಠಾನಕ್ಕೆ ತಂದಿದೆ. ಅವನ್ನು ಇಲ್ಲಿ ''ಗಂಗಾ ಕಲ್ಯಾಣ'' ಮತ್ತು ''ಭಾಗ್ಯಜ್ಯೋತಿ'' ಎಂದು ಕರೆಯುತ್ತೇವೆ. ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯನ್ನು ಉಲ್ಲಂಘಿಸುತ್ತಿರುವುದಕ್ಕೆ ಇದು ಇನ್ನೊಂದು ನಿದರ್ಶನವಾಗಿದೆ.

೧೩. ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಮಾನ್ಯ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ತಿಳಿಸದೆ ನಾನೆಂದೂ ಮುಚ್ಚಿಡಲು ಪ್ರಯತ್ನಿಸಿಲ್ಲ. ರಾಜ್ಯದ ಹಣಕಾಸು ಸ್ವಾಸ್ಥ್ಯವನ್ನು ಕುರಿತು ಕಾಲಕಾಲಕ್ಕೆ ಜನತೆಗೆ ತಿಳಿಸುವದು ಅಗತ್ಯವೆಂದು ನನ್ನ ಭಾವನೆ. ಆದಕ್ಕಾಗಿಯೇ ನಾನು ''ಸಂಪನ್ಮೂಲಗಳ ಕೊರತೆ ಏಕೆ ?'' ಮತ್ತು ''ರಾಜ್ಯ ಹಣಕಾಸು ಪರಿಸ್ಥಿತಿ'' ಎಂಬ ಎರಡು ಪ್ರಕಟಣೆಗಳನ್ನು ಹೊರಡಿಸಿದ್ದೇನೆ. ವಸ್ತು ಸ್ಥಿತಿಯನ್ನು ಅವುಗಳಲ್ಲಿ ಸ್ಪಷ್ಟಪಡಿಸಲಾಗಿದೆ ಈ ಪ್ರಕಟಣೆಗಳ ಪ್ರತಿಗಳನ್ನು ಈಗಾಗಲೇ ಮಾನ್ಯ ಸದಸ್ಯರಿಗೆ ಹಂಚಲಾಗಿದೆ.

೧೪. ನಮ್ಮ ಸರ್ಕಾರ ೧೯೮೩ರಲ್ಲಿ ಅಧಿಕಾರ ವಹಿಸಿಕೊಂಡಾಗ ೧೧೩.೨೫ ಕೋಟಿ ರೂಪಾಯಿಗಳಷ್ಟು ಕೊರತೆಯಿತ್ತು. ಇದರ ಜೊತೆಯಲ್ಲಿ ೬೨.೮೭ ಕೋಟಿ ರೂಪಾಯಿಗಳಷ್ಟು ಸಂದಾಯ ಸಂದಾಯ ಮಾಡದ ಬಿಲ್ಲುಗಳಿದ್ದವು. (ಶ್ರೀ ಎಸ್. ಬಂಗಾರಪ್ಪ, ಈಗ ಎಷ್ಟು ಬಿಲ್‌ಗಳು ಬಾಕಿ ಇವೆ? ಅಧ್ಯಕ್ಷರು ನಾಳೆ ಅದರ ಮೇಲೆ ತಾವು ಮಾತನಾಡಿ). ರಾಜ್ಯದ ಈಗಿನ ಆರ್ಥಿಕ ಸ್ಥಿತಿಗೆ ಕಳೆದ ಐದು ವರ್ಷ ಪದೇ ಪದೇ ಬಂದ ಬರಗಾಲವೊಂದೇ ಕಾರಣ ಎಂದೂ ನನ್ನ ವಾದವಲ್ಲ. ಅಂತೆಯೇ ನಮ್ಮ ಎಲ್ಲಾ ಸಮಸ್ಯೆಗಳಿಗೂ ಕೇಂದ್ರ ಸರ್ಕಾರವೇ ಪೂರ್ಣವಾಗಿ ಹೊಣೆ ಎಂದೂ ನಾನು ಹೇಳಲಾರೆ. ಆದರೇ ವಸ್ತು ಸ್ಥಿತಿ ವಸ್ತು ಸ್ಥಿತಿಯೇ. ಕೇಂದ್ರ ಸರ್ಕಾರದ ಹಣಕಾಸು ನೀತಿ ಮತ್ತು ಆರ್ಥಿಕ ನಿರ್ವಹಣೆಯನ್ನು ಟೀಕಿಸಿದಾಗಲೆಲ್ಲಾ ನಾನು ಸಂವಿಧಾನದ ಆಧಾರ ಮತ್ತು ವಸ್ತು ಸ್ಥಿತಿ ಹಾಗೂ ಸಮಗ್ರ ರಾಷ್ಟ್ರೀಯ ಹಿತ ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಟೀಕಿಸಿದ್ದೇನೆ. ನನ್ನ ಈ ನಿಲುವನ್ನು ಖ್ಯಾತ ಅರ್ಥಶಾಸ್ತ್ರಜ್ಞರು, ನ್ಯಾಯವೇತ್ತರು ಮಾತ್ರವಲ್ಲದೆ, ಸರ್ಕಾರಿಯಾ ಆಯೋಗದಂಥ ನಿಕಾಯಗಳೂ ಬೆಂಬಲಿಸಿರುವುದು ನನಗೆ ಹರ್ಷ ನೀಡಿದೆ.

೧೫. ಉತ್ತರದ ಕೆಲವಾರು ರಾಜ್ಯಗಳಲ್ಲಿ ಸಂಭವಿಸಿದ ಕೇವಲ ಒಂದು ವರ್ಷದ ತೀವ್ರ ಬರಗಾಲದಿಂದ ಕೇಂದ್ರ ಸರ್ಕಾರವು ತತ್ತರಿಸಿ ಹೋಗಿದೆ. ಅದಕ್ಕಾಗಿ ಅವರು ವಿದೇಶಿ ಸಾಲಗಳನ್ನು ಪಡೆಯಲು ಪ್ರಾರಂಭಿಸಿದ್ದಾರೆ ಮತ್ತು ಅನೇಕ ರಾಷ್ಟ್ರಗಳಿಂದ ಧನ ಸಹಾಯ ಕೋರಿ ಪಡೆದಿದ್ದಾರೆ.

ಬರಗಾಲವನ್ನು ಎದುರಿಸಲು ಅಧಿಭಾರದ ರೂಪದಲ್ಲಿ ಹೆಚ್ಚು ತೆರಿಗೆ ಹೇರಿದ್ದಾರೆ. ಅದನ್ನು ಈ ವರ್ಷವೂ ಮುಂದುವರೆಸಿದ್ದಾರೆ, ಐದು ವರ್ಷಗಳ ಕಾಲ ನಿರಂತರವಾಗಿ ಬರಗಾಲವನ್ನು ಎದುರಿಸಿದ ನಮ್ಮಂಥ ರಾಜ್ಯಗಳ ಸಂಕಷ್ಟಗಳನ್ನು ಕೇಂದ್ರವು ಕೊನೇಪಕ್ಷ ಈಗಲಾದರೂ ಅರ್ಥ ಮಾಡಿಕೊಳ್ಳುತ್ತದೆ ಮತ್ತು ರಾಜ್ಯ ಆರ್ಥಿಕ ಸ್ಥಿತಿಗೆ ಅದರಿಂದಾದ ಅನಾಹುತ ಅದಕ್ಕೆ ಚೆನ್ನಾಗಿ ಮನವರಿಕೆ ಆಗುತ್ತದೆ ಎಂದು ನಾನು ಆಶಿಸುತ್ತೇನೆ.

೧೬. ಇಂಥ ಪ್ರತಿಕೂಲ ಪರಿಸ್ಥಿತಿ ಇದ್ದಾಗ್ಯೂ, ಸುಮಾರು ಎಲ್ಲ ಅಭಿವೃದ್ಧಿ ಕ್ಷೇತ್ರಗಳಲ್ಲಿನ ನಮ್ಮ ಸಾಧನೆಯ ಬಗ್ಗೆ ನ್ಯಾಯವಾಗಿಯೇ ಹೆಮ್ಮೆ ಪಟ್ಟುಕೊಳ್ಳಬಹುದು. ''ಕರ್ನಾಟಕದಲ್ಲಿ ಜನತಾ ಆಡಳಿತ–ಐದು ಸಾರ್ಥಕ ಸಂವತ್ಸರಗಳು'' ಎಂಬ ಪುಸ್ತಿಕೆಯು ನಮ್ಮ ಸಾಧನೆಗಳ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಕೇವಲ ಕಳೆದ ವರ್ಷದಿಂದ ಬರಗಾಲದ ಸಂಚಿತ ಪರಿಣಾಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಬೀಳಲಾರಂಭಿಸಿದೆ.

೧೭. ಒಂದು ಕಡೆ ರಾಜ್ಯ ಸರ್ಕಾರಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರೆ. ಮತ್ತೊಂದು ಕಡೆ ಕೇಂದ್ರ ಸರ್ಕಾರದ ಹಣಕಾಸು ಸ್ಥಿತಿ ತೀರಾ ಹದಗೆಟ್ಟಿದೆ. ರಾಜಸ್ವ ಕೊರತೆ ಹಿಂದೆಂದೂ ಇರದಷ್ಟು ಹೆಚ್ಚಾಗಿದೆ. ಅವರು ಸಂದಾಯ ಮಾಡದೇ ಉಳಿದ ಬಿಲ್ಲುಗಳು ೪,೦೦೦ ಕೋಟಿ ರೂಪಾಯಿಗಳನ್ನು ಮೀರಿವೆ ಹಾಗೂ ಸರ್ಕಾರಿ ಉದ್ಯಮಗಳ ಬಿಲ್ಲು ಸಂದಾಯದಲ್ಲಿ ಗಣನೀಯ ವಿಳಂಬವಾಗುತ್ತಿದೆ ಎಂದು ನನಗೆ ತಿಳಿದು ಬಂದಿದೆ.

೧೮. ಯೋಜನಾ ಆಯೋಗದವರು ಏಳನೇ ಯೋಜನೆಯ ಮಧ್ಯಕಾಲೀನ ಗುಣ ವಿಮರ್ಶೆಯನ್ನು ಮಾಡಿದಾಗ, ರಾಷ್ಟ್ರದ ಸರ್ಕಾರಿ ಸಾಲವು ಸುಮಾರು ೨,೨೦,೦೦೦ ಕೋಟಿ ರೂಪಾಯಿಗಳಷ್ಟಾಗಿದೆ ಮತ್ತು ಸಾಲದ ಮೇಲಿನ ಬಡ್ಡಿ ಸಂದಾಯ ಮಾಡುವ ವಾರ್ಷಿಕ ಹೊಣೆಯು ಈಗಾಗಲೇ ೧೪,೧೦೦ ಕೋಟಿ ರೂಪಾಯಿಗಳಿಗೂ ಮೀರಿದೆ ಎಂಬ ವಿಷಯವನ್ನು ತಿಳಿಸಿದ್ದಾರೆ. ರಾಷ್ಟ್ರವು ಸಾಲದ ಬಲೆಯಲ್ಲಿ ಸಿಲುಕಿಕೊಂಡಿದೆ. ಇನ್ನೂ ಮುಂದುವರಿದು, ಆಯೋಗವು ''ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ, ಹಣದುಬ್ಬರನ್ನುಂಟು ಮಾಡುವ ಪ್ರಧಾನ ಅಂಶ ಎಂದರೆ ಭಾರಿ ಮೊತ್ತದ ಕೊರತೆ ಅರ್ಥವ್ಯವಸ್ಥೆ'' ಎಂಬುದಾಗಿ ಎಚ್ಚರಿಸಿದ್ದಾರೆ. ಕೊರತೆ ಅರ್ಥ ವ್ಯವಸ್ಥೆಯ ಮೇಲಿನ ಅವಲಂಬನೆಯು ಈಗ ಹೆಚ್ಚು ಕಡಿಮೆ ಶೇಕಡ ೨೭ ರಷ್ಟು ಎಂದರೆ ಎರಡು ಪಟ್ಟು ಹೆಚ್ಚಾಗಿವೆ ಇದು ಮೂಲದಲ್ಲಿ ಶೇಕಡ ೧೪.೧ ಎಂಬುದಾಗಿ ಅಂದಾಜು ಮಾಡಲಾಗಿತ್ತು. ಮಧ್ಯಕಾಲೀನ ಗುಣ ವಿಮರ್ಶೆಯಿಂದ ಯೋಜನೇತರ ವೆಚ್ಚದಲ್ಲಿ ಆಗಿರುವ ಭಯಾನಕ ಬೆಳವಣಿಗೆಯ ಚಿತ್ರ ಮೂಡಿ ಬರುತ್ತದೆ. ಕಳೆದ ೭ ವರ್ಷಗಳ ಬಜೆಟಿನಲ್ಲಿ ಆಗಿರುವ ಯೋಜನೇತರ ವೆಚ್ಚ ಮತ್ತು ಯೋಜನಾ ವೆಚ್ಚಗಳಲ್ಲಿನ ಹೆಚ್ಚಳವನ್ನು ಅನುಬಂಧ–Iರಲ್ಲಿ ಕೊಡಲಾಗಿದೆ.

೧೯. ಕೇಂದ್ರ ಹಾಗೂ ರಾಜ್ಯಗಳ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಮುಂದಿನ II ರಿಂದ XIರ ವರೆಗಿನ ಅನುಬಂಧಗಳಲ್ಲಿ ಕೊಡಲಾಗಿದೆ.—

(i) ೧೯೭೪–೧೯೮೭ರ ವರೆಗಿನ ಕೇಂದ್ರ ಮತ್ತು ರಾಜ್ಯಗಳ ಬಜೆಟ್ ಹೆಚ್ಚಳಗಳು ಮತ್ತು ಕೊರತೆಗಳು (ಅನುಬಂಧ–II).

(ii) ವಿತ್ತ ಆಯೋಗ, ಯೋಜನಾ ಆಯೋಗಗಳ ವಿಧಿಬದ್ಧ ಲಿಖಿತ ಪತ್ರಗಳ ಮೂಲಕ ಮತ್ತು ಕೇಂದ್ರ ಸರ್ಕಾರದ ವಿವೇಚನಾನುಸಾರ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಗಳಿಗೆ ಆರ್ಥಿಕ ವರ್ಗಾವಣೆಗಳು (ಅನುಬಂಧ–III)

(iii) ಕೇಂದ್ರದ ಆಯವ್ಯದಲ್ಲಿ ಕೊರತೆಗಳ ಪ್ರವೃತ್ತಿ ಮತ್ತು ಕೇಂದ್ರ ಸರ್ಕಾರಕ್ಕೆ ಭಾರತದ ರಿಸರ್ವ್ ಬ್ಯಾಂಕಿನಿಂದ ನಿವ್ವಳ ಜಮೆ (ಅನುಬಂಧ–IV).

(iv) ಕೇಂದ್ರ ಸರ್ಕಾರದ ರಾಜಸ್ವ ಜಮೆಗಳು, ರಾಜಸ್ವ ವೆಚ್ಚ ಮತ್ತು ಮಾರುಕಟ್ಟೆ ಬೆಲೆಯಲ್ಲಿ ಜಿಡಿಪಿ ಶೇಕಡವಾರು ರೂಪದಲ್ಲಿ ರಾಜಸ್ವ ಕೊರತೆ (ಅನುಬಂಧ–V),

(v) ಒಟ್ಟು ಮಾರುಕಟ್ಟೆ ಸಾಲಗಳಲ್ಲಿ (ವಾಸ್ತವಿಕ) ರಾಜ್ಯಗಳ ಪಾಲು (ಅನುಬಂಧ–VI)

(vi) ಒಟ್ಟು ಯೋಜನಾ ವೆಚ್ಚದಲ್ಲಿ, ದಾಮಾಷಾ ರೂಪದಲ್ಲಿ ರಾಜ್ಯದ ಸ್ವಂತ ರಾಜಸ್ವಗಳು (ಅನುಬಂಧ–VII),

(vii) ಒಟ್ಟು ಯೋಜನಾ ವೆಚ್ಚದಲ್ಲಿ ರಾಜ್ಯದ ಪಾಲು (ಅನುಬಂಧ–VIII).

(viii) ಬೇರೆ ಬೇರೆ ಯೋಜನಾ ಅವಧಿಗಳಲ್ಲಿ ಸರ್ಕಾರಿ ವಲಯದ ಯೋಜನಾ ವೆಚ್ಚಕ್ಕೂ ಮಾರುಕಟ್ಟೆ ಸಾಲಗಳಿಗೂ ಇರುವ ಪ್ರಮಾಣ (ಅನುಬಂಧ–IX).

(ix) ಸರ್ಕಾರಿ ವಲಯದಲ್ಲಿ ಬಾಂಡು – ಸಾಲಪತ್ರಗಳ ನೀಡಿಕೆ (ಅನುಬಂಧ–X) ಮತ್ತು

(x) ೧೯೭೫-೭೬ರ ಕೇಂದ್ರ ಮತ್ತು ರಾಜ್ಯಗಳ ಯೋಜನಾ ವೆಚ್ಚದ ಸಂಕ್ಷಿಪ್ತ (ಅನುಬಂಧ–XI).

೨೦. ಪದೇ ಪದೇ ಕಾಡಿದ ಬರಗಾಲದ ಪರಿಣಾಮಗಳ ಜೊತೆಗೆ, ಪ್ರಶಾಸಿತ ಬೆಲೆಗಳಲ್ಲಿ ನಿಯಂತಕಾಲಿಕ ಏರಿಕೆಯಂತಹ, ಭಾರತ ಸರ್ಕಾರದ ಕ್ರಮಗಳ ಸರಣಿ ನಮ್ಮ ಆರ್ಥಿಕ ತೊಂದರೆಗಳನ್ನು ಮತ್ತಷ್ಟು ಹೆಚ್ಚಿಸಿದೆ. ಭಾರತ ಸರ್ಕಾರವು, ಪೆಟ್ರೋಲ್, ಡೀಸೆಲ್, ಉಕ್ಕು, ಸಿಮೆಂಟು, ಕಲ್ಲಿದ್ದಲು ಇತ್ಯಾದಿಗಳ ಪ್ರಶಾಸಿತ ಬೆಲೆಗಳನ್ನು ಏರಿಸುತ್ತಾ ಬಂದಿದೆ. ಪೆಟ್ರೋಲು ಮತ್ತು ಡೀಸೆಲ್ಲುಗಳ ಬೆಲೆ ಏರಿಕೆಯು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಂಥ ಸರ್ಕಾರಿ ಉದ್ಯಮಗಳ ತೊಡಗು–ವೆಚ್ಚಗಳನ್ನು ಏರಿಸಿದೆ. ಕಲ್ಲಿದ್ದಲಿನ ಬೆಲೆ ಏರಿಕೆಯು ನಮ್ಮ ಪ್ರಮುಖ ಸಾರ್ವಜನಿಕ ಉದ್ಯಮವಾದ ಕರ್ನಾಟಕ ವಿದ್ಯುತ್ ನಿಗಮವನ್ನು ಬಾಧಿಸುತ್ತದೆ. ಉಕ್ಕಿನ ಮೇಲಿನ ಬೆಲೆ ಏರಿಕೆ ನಮ್ಮ ಉದ್ಯಮಗಳ ಮೇಲೆ ದುಷ್ಪರಿಣಾಮ ಮಾಡುತ್ತದೆ. ಈ ನೀತಿಯನ್ನು ಎಲ್ಲ ರಾಜ್ಯಗಳು ಪದೇ ಪದೇ ಟೀಕಿಸುತ್ತಾ ಬಂದಿವೆ. ಇದರಿಂದ ರಾಜ್ಯಗಳಿಗೆ ಎರಡು ರೀತಿಯಲ್ಲಿ ಧಕ್ಕೆಯುಂಟಾಗುತ್ತದೆ. ಮೊದಲನೆಯದಾಗಿ, ಉತ್ಪಾದನಾ ಶುಲ್ಕದ ರೂಪದಲ್ಲಿ ಈ ಹೆಚ್ಚಳಗಳನ್ನು ಮಾಡಿದ್ದಿದ್ದರೆ, ರಾಜ್ಯಗಳಿಗೆ ಹೆಚ್ಚುವರಿ ಆದಾಯದಲ್ಲಿ ನ್ಯಾಯಯುತ ಪಾಲು ದೊರಕುತ್ತಿತ್ತು. ಈ ಕ್ರಮದಿಂದ ಅದು ತಪ್ಪಿ ಹೋಗುವುದು. ಎರಡನೆಯದಾಗಿ ದರದ ಏರಿಕೆಯಿಂದ ರಾಜ್ಯಗಳ ಯೋಜನಾ ವೆಚ್ಚವನ್ನು ಇದು ಏರಿಸುತ್ತದೆ.

೨೧. ಯೋಜನೇತರ ವೆಚ್ಚಗಳನ್ನು ಆದಷ್ಟು ಕನಿಷ್ಠ ಮಿತಿಯಲ್ಲಿ ಇರಿಸಿಕೊಂಡು ಬರುವುದು ಅಪೇಕ್ಷಣೀಯ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಪ್ರಸಕ್ತ ವರ್ಷ ಯೋಜನೇತರ ವೆಚ್ಚವನ್ನು ಹಿಡಿತದಲ್ಲಿರಿಸಿದ ಕಾರಣದಿಂದಾಗಿ ನಮ್ಮ ರಾಜಸ್ವ ಲೆಕ್ಕದಲ್ಲಿ ಸುಧಾರಣೆ ಉಂಟಾಗಿದೆ. ಆದರೆ, ಕೇಂದ್ರ ಸರ್ಕಾರದ ಕಾರ್ಯನೀತಿಗಳಿಂದಾಗಿ ನಮ್ಮ ಯೋಜನೇತರ ವೆಚ್ಚ ಅನಿವಾರ್ಯವಾದಾಗ, ನಾವು ಏನು ತಾನೆ ಮಾಡಲು ಸಾಧ್ಯ? ಹಣದುಬ್ಬರವನ್ನು ನಿಯಂತ್ರಣದಲ್ಲಿರಿಸಲು ಅವರು ಅಸಮರ್ಥರಾದ ಕಾರಣದಿಂದಾಗಿ ಅವರ ನೌಕರರಿಗೆ ನಿಯತಕಾಲಿಕವಾಗಿ ತುಟ್ಟಿಭತ್ಯದ ಕಂತುಗಳನ್ನು ಕೊಡಬೇಕಾಗಿ ಬಂತು. ಅನಿವಾರ್ಯವಾಗಿ, ರಾಜ್ಯಗಳೂ ಇದನ್ನೇ ಅನುಸರಿಸಬೇಕಾಯಿತು. ೧೯೭೨-೭೩ ರಿಂದ ೧೯೭೬-೭೭ರ ವರೆಗಿನ ವರ್ಷಗಳಲ್ಲಿ ನಮ್ಮ ಸರ್ಕಾರವು ಹೆಚ್ಚುವರಿ ತುಟ್ಟಿಭತ್ಯ ಕಂತುಗಳ ಪಾವತಿಗಾಗಿ ೨೫೫.೦೭ ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಬೇಕಾಗಿ ಬಂತು. ವಿಪರೀತ ಹಣದುಬ್ಬರ ವಿಲ್ಲದೇ ಹೋಗಿದ್ದಲ್ಲಿ ನಾವು ನಮ್ಮ ಸಂಪನ್ಮೂಲದ ಬಹುಪಾಲನ್ನು ಅಭಿವೃದ್ಧಿ ಕಾರ್ಯಗಳ ಮೇಲೆ ವೆಚ್ಚ ಮಾಡಲು ಸಾಧ್ಯವಾಗುತ್ತಿತ್ತು.

೨೨. ಪ್ರಸಕ್ತ ವರ್ಷ, ಹಿಂದಿನ ಸಾಧನೆಗಳನ್ನು ಆಧರಿಸಿ ಮಹತ್ವಾಕಾಂಕ್ಷೆಯ ಯೋಜನೆಯನ್ನು ನಾವು ಹೊಂದಿದ್ದೆವು. ೧೯೭೩-೭೪, ೧೯೭೪-೭೫ ಮತ್ತು ೧೯೭೫-೭೬ನೇ ವರ್ಷಗಳಲ್ಲಿ ಹಣಕಾಸು ಮತ್ತು ಭೌತಿಕ ದೃಷ್ಟಿಯಿಂದ ನಮ್ಮ ಸಾಧನೆ ಗುರಿ ಮೀರಿದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದೆ ಇದೆ. ಅನುಮೋದಿತ ಯೋಜನೆಗಳು ಹಾಗೂ ವಾಸ್ತವ ವೆಚ್ಚಗಳು ಈ ಮುಂದಿನಂತಿವೆ.

(ಕೋಟಿ ರೂ.ಗಳಲ್ಲಿ)

ವರ್ಷ	ಅನುಮೋದಿತ ವೆಚ್ಚ	ವಾಸ್ತವ ವೆಚ್ಚ
೧೯೭೩-೭೪	೫೭೫.೦೦	೬೩೨.೫೩
೧೯೭೪-೭೫	೬೫೦.೨೮	೭೬೭.೧೦
೧೯೭೫-೭೬	೬೫೦.೫೫	೬೬೫.೨೧

೨೩. ೧೯೮೭-೮೮ನೇ ವರ್ಷದಲ್ಲೂ ೭೬೫ ಕೋಟಿ ರೂಪಾಯಿ ಉದ್ದೇಶಿತ ವೆಚ್ಚಕ್ಕೆ ಪ್ರತಿಯಾಗಿ, ೭೯೭.೧೩ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಈ ವರ್ಷ ಮಳೆಗಾಲ ಅನುಕೂಲಕರವಾಗಬಹುದೆಂಬ ಹಾಗೂ ಅದರಿಂದಾಗಿ ಸಂಪನ್ಮೂಲ ಪರಿಸ್ಥಿತಿಯಲ್ಲಿ ಸುಧಾರಣೆಯಾಗಬಹುದೆಂಬ ನಿರೀಕ್ಷೆಯಿಂದ ನಾವು ಯೋಜನಾ ವೆಚ್ಚವನ್ನು ೯೧೭ ಕೋಟಿ ರೂಪಾಯಿಗೆ ಏರಿಸಿದೆವು. ಇದು ಯೋಜನಾ ಆಯೋಗವು ಅನುಮೋದಿಸಿದ ವೆಚ್ಚಕ್ಕಿಂತ ೪೭ ಕೋಟಿ ರೂಪಾಯಿಯಷ್ಟು ಹೆಚ್ಚಿನದಾಗಿತ್ತು. ನಮ್ಮ ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿ ಮುಂಗಾರು ಮಳೆ ಪೂರ್ಣವಾಗಿ ವಿಫಲವಾದ್ದರಿಂದ ಸಂಪನ್ಮೂಲ ಪರಿಸ್ಥಿತಿ ಇನ್ನಷ್ಟು ಕ್ಷೀಣಿಸಿತು. ಈ ಕಾರಣದಿಂದ ಯೋಜನಾ ವೆಚ್ಚವನ್ನು ಕಡಿಮೆ ಮಾಡುವುದು ಅನಿವಾರ್ಯವಾಯಿತು. ಈ ರೀತಿ ಕಡಿಮೆ ಮಾಡಿದ ಹಣದ ಮೊತ್ತ ಸುಮಾರು ೨೫೦ ಕೋಟಿ ರೂಪಾಯಿಯಿಂದ ೩೦೦ ಕೋಟಿ ರೂಪಾಯಿಯಷ್ಟಾಗುವುದೆಂದು ನಾನು ಸೂಚಿಸಿದ್ದೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಂಥ ರಾಜ್ಯಗಳು ಸಹ ತಮ್ಮ ಯೋಜನಾ ಗಾತ್ರವನ್ನು ತೀವ್ರವಾಗಿ ಕಡಿಮೆ ಮಾಡಿರುವುವು. ಅದರಲ್ಲೂ ಉತ್ತರ ಪ್ರದೇಶ ರಾಜ್ಯವು ಯೋಜನಾ ಗಾತ್ರವನ್ನು ೧೦೦೦ ಕೋಟಿ ರೂಪಾಯಿಯಷ್ಟು ಕಡಿಮೆ ಮಾಡಿದೆ. ಇದರಿಂದ ನಾವು ಸಾಂತ್ವನ ಪಡೆಯುವ ಹಾಗಿಲ್ಲ. ಒಟ್ಟು ಯೋಜನಾ ವೆಚ್ಚವನ್ನು ಕಡಿಮೆ ಮಾಡಿದ್ದರಿಂದಾಗಿ ನೀರಾವರಿ ಮತ್ತು ವಿದ್ಯುತ್‌ನಂತಹ ನಮ್ಮ ಆದ್ಯತಾ ವಲಯಗಳು ತುಂಬಾ ತೊಂದರೆಗೊಳಗಾದವು. ಆದರೂ, ಜಿಲ್ಲಾ ಪರಿಷತ್ತುಗಳ ಸಂಪನ್ಮೂಲಗಳಿಗೆ ಕಡಿತ ಉಂಟುಮಾಡಲಿಲ್ಲ. ಮುಂದಿನ ವರ್ಷಕ್ಕಾಗಿ ನಾವು ೯೦೦ ಕೋಟಿ ರೂಪಾಯಿ ವೆಚ್ಚಕ್ಕೆ ಪ್ರಸ್ತಾವಿಸಿದ್ದೇವೆ. ವಲಯವಾರು ಹಂಚಿಕೆಯನ್ನು ಅನುಬಂಧ-XIIರಲ್ಲಿ ಕೊಡಲಾಗಿದೆ. ಮುಂದಿನ ವರ್ಷದ ಯೋಜನಾ ಗುರಿಗಳನ್ನು ಸಾಧಿಸುವ ನಮ್ಮ ಸಾಮರ್ಥ್ಯವು ಬಹುಮಟ್ಟಿಗೆ ಮಳೆಯನ್ನೇ ಅವಲಂಬಿಸಿದೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲ.

೨೪. ಕಳೆದ ಐದು ವರ್ಷಗಳ ಅವಧಿಯಲ್ಲಿ ರೈತರಿಗೆ ಹಲವಾರು ರಿಯಾಯಿತಿಗಳು ಮತ್ತು ಪರಿಹಾರಗಳನ್ನು ಸರ್ಕಾರ ನೀಡಿದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆ. ಇತ್ತೀಚೆಗೆ, ನಿರಂತರ ಬರಗಾಲದಿಂದ ಉಂಟಾದ ಬವಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸರ್ಕಾರವು ಮತ್ತೊಮ್ಮೆ ಬಡ್ಡಿ ಹೊರೆಯನ್ನು ಮನ್ನಾ ಮಾಡಲು ನಿರ್ಧರಿಸಿದೆ. ಆದರೆ, ಒಂದು ವಿಷಯದ ಬಗ್ಗೆ ನಾವು ಸ್ಪಷ್ಟವಾಗಿರಬೇಕು. ನೀರಾವರಿ ಸೌಲಭ್ಯ ಪಡೆದಿರುವಂಥ ರೈತರು ಕನಿಷ್ಟಪಕ್ಷ ಯೋಜನೆಗಳ ನಿರ್ವಹಣಾ ವೆಚ್ಚವನ್ನಾದರೂ ವಹಿಸುವುದಕ್ಕೆ ಸಾಕಾಗುವಷ್ಟು ತೆರಿಗೆಯನ್ನು ನೀಡಲು ಒಪ್ಪಲೇಬೇಕು. ಇಲ್ಲದಿದ್ದರೆ, ನಿರಂತರ ಬರಗಾಲಕ್ಕೆ ತುತ್ತಾಗುವ ರೈತರನ್ನು ರಕ್ಷಿಸಲು ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹೂಡಲು ಸಾಧ್ಯವಾಗುವುದಿಲ್ಲ. ಈ ಸಂಬಂಧದಲ್ಲಿ ನೀರಾವರಿ ಸಚಿವರು ಈಗಾಗಲೇ ಪರಿಸ್ಥಿತಿಯನ್ನು ಸ್ಪಷ್ಟಪಡಿಸಿದ್ದಾರೆ.

೨೫. ವಿದ್ಯುಚ್ಛಕ್ತಿ ವಲಯದಲ್ಲಿ ನಾವು ಏನನ್ನು ಮಾಡಿದ್ದೇವೆ ಎಂಬುದರ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಹಣಕಾಸು ಒದಗಿಸಲು ನಮಗೆ ಸಾಧ್ಯವಾಗದಿರುವುದು ನಮ್ಮ ಕೈಗಾರಿಕಾ ಅಭಿವೃದ್ಧಿಗೆ ಮುಖ್ಯವಾದ ಅಡ್ಡಿಯಾಗುತ್ತಿದೆ. ಈ ಪರಿಸ್ಥಿತಿ ನಮಗೆ ತುಂಬಾ ಕಳವಳವನ್ನು ಉಂಟು ಮಾಡಿದೆ. ಇಂದಿನ ಪರಿಸ್ಥಿತಿ ಏನೆಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಗಮಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಬರಬೇಕಾದ ಬಹಳಷ್ಟು ಹಣ ಬಾಕಿ ಇದೆ. ಹಾಗೂ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಿಂದ ಬರಬೇಕಾದ ಬಹಳಷ್ಟು ಹಣ ಬಾಕಿ ಇದೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಭಾರತದ ಉಕ್ಕು ಪ್ರಾಧಿಕಾರವು ವಹಿಸಿಕೊಳ್ಳುವಂತೆ, ಕೇಂದ್ರ ಸರ್ಕಾರದ ಮನವೊಲಿಸಲು ಕಳೆದ ಐದು ವರ್ಷಗಳಲ್ಲಿ ನಾವು ಹಲವಾರು ಪ್ರಯತ್ನಗಳನ್ನು ಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತು. ನಾನು ಈ ವಿಷಯದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಿಗಳ ಜೊತೆ ಹಲವಾರು ಬಾರಿ ಚರ್ಚಿಸಿದ್ದೇನೆ. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರ ಮತ್ತು ಭಾರತದ ಉಕ್ಕು ಪ್ರಾಧಿಕಾರವು ಸೂಚಿಸಿರುವ ಎಲ್ಲಾ ಷರತ್ತುಗಳನ್ನು ನಾವು ಒಪ್ಪಿದ್ದೇವೆ. ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರವು ಅಧಿಕಾರಿಗಳ ಮಟ್ಟದಲ್ಲಿ ತಾಂತ್ರಿಕ ಮತ್ತು ಹಣಕಾಸು ಒಪ್ಪಿಗೆ ನೀಡಿದೆ. ಆದರೂ ಬಹಳ ದಿನಗಳಿಂದ ಈ ವಿಷಯ ಅಂತಿಮವಾಗಿ ನಿರ್ಧಾರವಾಗದೆ ಉಳಿದಿದೆ.

೨೬. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ನಾವು ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ೧೯೮೮–೮೯ರಲ್ಲಿ ಕಾರ್ಯಗತಗೊಳಿಸಲು ಈ ಮುಂದಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

(i) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ IVನೇ ಹಂತ—೨೧೦ ಮೆಗಾವ್ಯಾಟ್

(ii) ಶರಾವತಿ ಟೇಲ್ ರೇಸ್ ಯೋಜನೆ—೨೪೦ ಮೆಗಾವ್ಯಾಟ್

(iii) ಬಂಧಿತ ಡೀಸಲ್ ವಿದ್ಯುತ್ ಜನಕಗಳು-೭೭ ಮೆಗಾವ್ಯಾಟ್ ಮತ್ತು

(iv) ಯಲಹಂಕ ಗ್ಯಾಸ್ ಟರ್ಬೈನ್ ಡೀಸೆಲ್ ಯೋಜನೆ—೧೨೦ ಮೆಗಾವ್ಯಾಟ್

ಈ ಕೆಳಕಂಡ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ ಇನ್ನೂ ದೊರೆತಿಲ್ಲ.

(i) ಬೃಂದಾವನ ಕಿರು ಜಲವಿದ್ಯುತ್ ಯೋಜನೆ, ಮತ್ತು

(ii) ಶಿವನಸಮುದ್ರ ಋತುಮಾನ ಜಲವಿದ್ಯುತ್ ಯೋಜನೆ

೨೭. ಮೂರು ಸಹಕಾರ ಸಕ್ಕರೆ ಕಾರ್ಖಾನೆಗಳ ಲೈಸನ್ಸಿಗಾಗಿ ಮತ್ತು ಇತರೆ ನಾಲ್ಕು ಕಾರ್ಖಾನೆಗಳ ವಿಸ್ತರಣೆಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ನಾವು ಶಿಫಾರಸು ಮಾಡಿ ಕಳುಹಿಸಿ ಕೊಟ್ಟಿದ್ದರೂ, ಇಂದಿನವರೆಗೂ ರಾಜ್ಯಕ್ಕೆ ಒಂದು ಕಾರ್ಖಾನೆಗೂ ಮಂಜೂರಾತಿ ದೊರೆತಿಲ್ಲ. ಕೆಲವು ರಾಜ್ಯಗಳ ಬಗ್ಗೆ ಒಲವು ತೋರಿಸಲಾಗುತ್ತಿದ್ದು ನಮ್ಮ ರಾಜ್ಯದ ವಿಷಯದಲ್ಲಿ ಮಲತಾಯಿ ಧೋರಣೆಯನ್ನು ತೋರುತ್ತಿರುವ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

೨೮. ಕೇಂದ್ರ ಬಂಡವಾಳ ಹೂಡಿಕೆಯಲ್ಲಿ, ಕರ್ನಾಟಕಕ್ಕೆ ಅದರ ನ್ಯಾಯಯುತ ಪಾಲು ದೊರೆಯುತ್ತಿಲ್ಲ ಎಂಬುದನ್ನು ನಾನು ಇಲ್ಲಿ ಹೇಳಲೇಬೇಕಾಗಿದೆ. ಉದಾಹರಣೆಗೆ, ಹಲವಾರು ವರ್ಷಗಳಿಂದ ಕಾರ್ಯಗತವಾಗದೇ ಉಳಿದಿರುವ ರೈಲ್ವೆ ಯೋಜನೆಗಳಿಗೆ ಗಮನ ನೀಡಿಲ್ಲ. ಮಂಗಳೂರು ತೈಲ ಶುದ್ಧೀಗಾರ ಮತ್ತು ವಿಜಯನಗರ ಉಕ್ಕು ಸ್ಥಾವರಕ್ಕೆ ಸಂಬಂಧಿಸಿದಂತೆ ಯಾವ ಪ್ರಗತಿಯೂ ಆಗಿಲ್ಲ.

೨೯. ರಾಜ್ಯದ ಆರ್ಥಿಕ ಅಭಿವೃದ್ಧಿಯು, ನಮ್ಮ ಉದ್ಯಮಗಳ ಸೂಕ್ತ ಹಾಗೂ ಹಿತಕರವಾದ ಬೆಳವಣಿಗೆಯ ಮೇಲೆ ಬಹುಮಟ್ಟಿಗೆ ಅವಲಂಬಿಸಿದೆ. ೧೯೮೮–೮೯ರಲ್ಲಿ ಈ ಕೆಳಕಂಡವುಗಳನ್ನು ಕಾರ್ಯಗತಗೊಳಿಸಲು ನಾನು ಉದ್ದೇಶಿಸಿದ್ದೇನೆ.

(ಅ) ಇತರ ವಿಷಯಗಳೊಂದಿಗೆ ನಷ್ಟದಲ್ಲಿ ನಡೆಯುತ್ತಿರುವ ಉದ್ಯಮಗಳ ಪುನರುಜ್ಜೀವನವೂ ಸೇರಿದಂತೆ ಸಣ್ಣ ಉದ್ಯಮಗಳಿಗಾಗಿ ಸಮಗ್ರ ಶಾಸನವೊಂದನ್ನು ತರುವುದು.

(ಆ) ಕರ್ನಾಟಕ ರಾಜ್ಯದಲ್ಲಿ ಉದ್ಯಮಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹೊಸದಾಗಿ ಹಲವು ಉತ್ತೇಜಕಗಳನ್ನು ರೂಪಿಸಲಾಗುವುದು. ಸಾಕಷ್ಟು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಮತ್ತು ಬಜೆಟ್ ಸಹಾಯವನ್ನು ಅಷ್ಟಾಗಿ ಅವಲಂಬಿಸದೆ ಇರುವಂತೆ ಮಾಡುವುದು ಈ ಉತ್ತೇಜಕಗಳ ಪ್ರಮುಖ ಲಕ್ಷಣವಾಗಿದೆ.

(ಇ) ಉದ್ಯಮಗಳ ಬಂಧಿತ (ಕ್ಯಾಪ್ಟಿವ್) ವಿದ್ಯುತ್ ಉತ್ಪಾದನೆ ಮಾಡುವುದನ್ನು ಮತ್ತು ಸೂಕ್ತ ಮಾಲಿನ್ಯ ನಿಯಂತ್ರಣ ಕ್ರಮ ಕೈಗೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿ, ವಿಶೇಶ ಕ್ರಮ ಕೈಗೊಳ್ಳಲಾಗುವುದು. ಹಾಗೂ ಇವುಗಳಿಗೆ ಹೆಚ್ಚು ಉತ್ತೇಜಕಗಳನ್ನು ನೀಡುವುದು.

(ಈ) ಎಲೆಕ್ಟ್ರಾನಿಕ್ ನಗರ ಸ್ಥಾಪನೆಯನ್ನು ಬೆಂಗಳೂರು ಹೊರತಾಗಿ ಮೊದಲಿಗೆ ಮೈಸೂರಿನಲ್ಲಿ ಮಾಡಿ ಅನಂತರ ರಾಜ್ಯದ ಇತರ ಭಾಗಗಳಿಗೂ ವಿಸ್ತರಿಸುವುದು.

(ಉ) ಕಂಪ್ಯೂಟರ್ ಸಾಫ್ಟ್‌ವೇರನ್ನು ಅಭಿವೃದ್ಧಿಪಡಿಸುವ ಮತ್ತು ರಫ್ತು ಮಾಡುವ ತುರ್ತು ಅಗತ್ಯವಿರುವುದರಿಂದ, ಬೆಂಗಳೂರು ಮತ್ತು ಮೈಸೂರು ನಗರಗಳ ಹೊರವಲಯಗಳಲ್ಲಿ ೧೦ ಸಾಫ್ಟ್‌ವೇರ್ ಕಾಂಪ್ಲೆಕ್ಸ್‌ಗಳ ಸ್ಥಾಪನೆಗೆ ಸರ್ಕಾರ ಅನುಮತಿ ನೀಡುವುದು.

(ಊ) ರಫ್ತು ಸಂಸ್ಕರಣ ವಲಯದ ಸ್ಥಾಪನೆಗಾಗಿ ವೈಟ್‌ಫೀಲ್ಡ್ ಸಮೀಪದಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ವಲಯದಲ್ಲಿ, ಉನ್ನತ ತಂತ್ರಜ್ಞಾನವುಳ್ಳ ಹೆಚ್ಚು ವಿದ್ಯುತ್ ಬಳಸದ ಹಾಗೂ ಮಾಲಿನ್ಯರಹಿತ ಮತ್ತು ಹೆಚ್ಚು ಉದ್ಯೋಗಾವಕಾಶವನ್ನು ಒದಗಿಸುವ ಉದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುವುದು.

(ಋ) ಕರ್ನಾಟಕ ಕೈಗಾರಿಕಾ ಪೆಡ್ಡುಗಳ ಯೋಜನೆಯ ಮೊದಲ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ, ನೆದರ್‌ಲ್ಯಾಂಡ್ ಸರ್ಕಾರದ ಹಣಕಾಸು ನೆರವಿನೊಂದಿಗೆ, ೧೯೮೮-೮೯ ರಿಂದ ಎರಡು ವರ್ಷಗಳ ಅವಧಿಯ ಮಧ್ಯ ಹಂತ ಯೋಜನಾ ಕಾರ್ಯವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಇದನ್ನು ೧೯೮೯-೯೦ರ ಹೊತ್ತಿಗೆ ಪೂರ್ಣಗೊಳಿಸಲಾಗುವುದು. ಆ ವೇಳೆಗೆ ಯೋಜನೆಯ ಎರಡನೇ ಹಂತದ ಯೋಜನಾ ಪ್ರಸ್ತಾವಗಳನ್ನು ರೂಪಿಸಲಾಗುವುದು.

೩೧. ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ನಾವು ಹಲವಾರು ಅಡೆತಡೆಗಳನ್ನು ಎದುರಿಸುತ್ತಿದ್ದರೂ, ಗಣನೀಯ ಸಾಧನೆಗಳನ್ನು ಮಾಡಿದ್ದೇವೆ. ಅವುಗಳಲ್ಲಿ ಕೆಲವು ಅನನ್ಯವಾದವು ಮತ್ತು ಅವುಗಳ ಬಗ್ಗೆ ಭಾರತ ಸರ್ಕಾರ ಮತ್ತು ಯೋಜನಾ ಆಯೋಗದವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ವಿಕೇಂದ್ರೀಕೃತ ಯೋಜನಾ ಪದ್ಧತಿ, ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮಗಳನ್ನು ಕುರಿತ ಕಾರ್ಯನೀತಿ, ಖುಷ್ಕಿ ಭೂಮಿ ಅಭಿವೃದ್ಧಿ ಮತ್ತು ಜಲಾನಯನ ಪ್ರದೇಶ ನಿರ್ವಹಣೆ ಕಾರ್ಯಕ್ರಮಗಳು, ಎಣ್ಣೆ ಕಾಳು ಕಾರ್ಯಕ್ರಮ, ವನ ನಿರ್ಮಾಣ ಮತ್ತು ಸಾಮಾಜಿಕ ಅರಣ್ಯ ನಿರ್ಮಾಣ ಕಾರ್ಯಕ್ರಮಗಳು, ಪಂಪ್ ಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಮತ್ತು ಗ್ರಾಮೀಣ ವಿದ್ಯುದೀಕರಣ ಇವು ರಾಷ್ಟ್ರದ ಉಳಿದ ಭಾಗಗಳಿಗೆ ಮಾದರಿಯಾಗಿವೆ.

೩೨. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೭-೮೮ರಲ್ಲಿ ಮನೆ ನಿವೇಶಗಳನ್ನು ಹಂಚುವ ಒಂದು ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ನಾನು ಕಳೆದ ವರ್ಷ ಹೇಳಿದ್ದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೭-೮೮ರಲ್ಲಿ ೧೬,೪೮೫ ನಿವೇಶನಗಳನ್ನು ಹಂಚಿಕೆ ಮಾಡಿದೆ ಯೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಹರ್ಷಿಸುತ್ತೇನೆ. ಈ ಒಂದು ವರ್ಷದಲ್ಲಿ ಮಾಡಿದ ಹಂಚಿಕೆಯ ಪ್ರಮಾಣವು ೧೯೭೪ ರಿಂದ ೧೯೮೬ರ ಅವಧಿಯಲ್ಲಿ ಮಾಡಿದ ನಿವೇಶನಗಳ ಹಂಚಿಕೆಯ ಪ್ರಮಾಣಕ್ಕಿಂತ ಬಹಳ ಹೆಚ್ಚು.

ಹೊಸ ಪ್ರಸ್ತಾವಗಳು ಮತ್ತು ಯೋಜನೆಗಳು

೩೩. ೧೯೮೮-೮೯ರಲ್ಲಿ ಕಾರ್ಯಗತಗೊಳಿಸಲಾಗುವ ಕೆಲವು ಪ್ರಮುಖ ಪ್ರಸ್ತಾವಗಳನ್ನು ಮತ್ತು ಕಾರ್ಯ ಯೋಜನೆಗಳ ಕುರಿತ ನಾನು ಇಲ್ಲಿ ಹೇಳಬಯಸುತ್ತೇನೆ.—

(i) ಸರ್ಕಾರವು ಸ್ಥಳೀಯ ಆರ್ಥಿಕ ಆಯೋಗದ ಕೆಲವು ಶಿಫಾರಸುಗಳನ್ನು ಅಂಗೀಕರಿಸಿದ್ದು, ನಗರ ನಿಗಮಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ವರ್ಗಾವಣೆ ಮಾಡುವುದಕ್ಕಾಗಿ ೧೯೮೮-೮೯ರ ಬಜೆಟ್ ಅಂದಾಜುಗಳಲ್ಲಿ ೩೦ ಕೋಟಿ ರೂಪಾಯಿಗಳಷ್ಟು ಹೆಚ್ಚು ಮೊತ್ತವನ್ನು ಒದಗಿಸಿದೆ. ಆಕ್ಟ್ರಾಯ್ ಪರಿಹಾರ ಅನುದಾನವನ್ನು ಶೇಕಡ ೧೦ ರಿಂದ ೧೨½ ರಷ್ಟು ಏರಿಸಿದ್ದರಿಂದ ಉಂಟಾದ ಬೆಳವಣಿಗೆ ದರದ ಹೆಚ್ಚಳವನ್ನು ಮತ್ತು ಮನೋರಂಜನ ತೆರಿಗೆಯ ಮೇಲಿನ ಸರ್‌ಚಾರ್ಜಿನ ಶೇಕಡಾ ೯೦ ಭಾಗವನ್ನು ಹಾಗೂ ಈ ಸ್ಥಳೀಯ ಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನಗಳಾಗಿ ಮೋಟಾರು ವಾಹನ ತೆರಿಗೆಯ ಜಮೆಯೊಳಗಿಂದ ಬರುವ ಸ್ವಲ್ಪ ಹಣವನ್ನು ವರ್ಗಾವಣೆ ಮಾಡಿ ಈ ಹೆಚ್ಚಿನ ಮೊತ್ತವನ್ನು ಒದಗಿಸಲಾಗಿದೆ.

(ii) ಬೆಂಗಳೂರಿನಲ್ಲಿ ಸಮೂಹ ಸಂಪರ್ಕ ಕೇಂದ್ರ ಸ್ಥಾಪನೆ ;

(iii) ರಾಜ್ಯ ಸರ್ಕಾರೀ ವಲಯ ಉದ್ಯಮ ಸಂಸ್ಥೆಗಳೊಂದಿಗೆ, ಔದ್ಯಮಿಕ ತರಬೇತಿ ಸಂಸ್ಥೆ ಮತ್ತು ಇತರ ತಾಂತ್ರಿಕ ಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ, ವೃತ್ತಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಯೋಜನೆ ;

(iv) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವಿದ್ಯಾರ್ಥಿಗಳಿಗೆ ೧೦೦ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸುವುದು ;

(v) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವಿದ್ಯಾರ್ಥಿಗಳಿಗೆ ೫೦ ಆಶ್ರಮ ಶಾಲೆಗಳನ್ನು ಆರಂಭಿಸುವುದು ;

(vi) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ೧೦೦ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸುವುದು ;

(vii) (ಎ) ರೈತರಿಗೆ (ಬಿ) ಸಿಟಿ ಮತ್ತು ಟೌನ್ ಮುನಿಸಿಪಲ್ ಪರಿಷತ್ತುಗಳಿಗೆ ಮತ್ತು (ಸಿ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಹಕಾರ ಗೃಹ ನಿರ್ಮಾಣ ಸಂಘಗಳಿಗೆ ಸರ್ಕಾರವು ನೀಡಿದ ಸಾಲಗಳ ಬಾಕಿಗಳನ್ನು ಮನ್ನಾ ಮಾಡುವುದು. ಮನ್ನಾ ಮಾಡಿದ ಸಾಲಗಳ ವಿವರಗಳನ್ನು ಅನುಬಂಧ-XIIIರಲ್ಲಿ ತೋರಿಸಲಾಗಿದೆ. ಇದರಲ್ಲಿ ಎಲ್.ಐ.ಸಿ.ಯಿಂದ ಕೊಡಿಸಿದ ನಾಲ್ಕು ಕೋಟಿ ರೂಪಾಯಿಗಳನ್ನು ಸಹ ಮನ್ನಾ ಮಾಡಿದ್ದೇವೆ.

(viii) ಸರ್ಕಾರದ ವಿವಿಧ ಇಲಾಖೆಗಳಿಗೆ ಸರ್ವಸಾಮಾನ್ಯವಾದ ಚೆಕ್ ಪೋಸ್ಟ್‌ಗಳ ಸ್ಥಾಪನೆ. ಈ ಚೆಕ್ ಪೋಸ್ಟುಗಳಿಗೆ ಮತ್ತು ವಾಹನಗಳು ತಂಗಲು ಸಾಕಷ್ಟು ಸ್ಥಳಾವಕಾಶ ಮತ್ತು ಟೆಲೆಕ್ಸ್ ಸೌಲಭ್ಯವೇ ಮುಂತಾದ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಸೂಕ್ತ ಕಟ್ಟಡಗಳನ್ನು ಒದಗಿಸಲಾಗುವುದು ;

(ix) ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಭವನದ ನಿರ್ಮಾಣ ;

(x) ಬೆಂಗಳೂರಿನಲ್ಲಿ ಮಾತ್ರ ಅಲ್ಲದೆ ಮೈಸೂರಿನಲ್ಲಿಯೂ ಅಂಬೇಡ್ಕರ್ ಭವನದ ಸ್ಥಾಪನೆಗಾಗಿ ವಿಶೇಷ ನೆರವು ;

(xi) ಹುಬ್ಬಳ್ಳಿಯಲ್ಲಿ ಕಲಾಭವನದ ಸ್ಥಾಪನೆ ;

(xii) ರಾಮನಗರ ಪಟ್ಟಣದ ಬಳಿ ಕರ್ನಾಟಕ ಜಾನಪದ ಟ್ರಸ್ಟ್ ಮೂಲಕ ಜಾನಪದ ಲೋಕ ಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ವಿಶೇಷ ನೆರವು;

(xiii) ಬೆಂಗಳೂರಿನ ಕಾರ್ಲ್‌ಟನ್ ಹೌಸಿನಲ್ಲಿ ನವ್ಯಕಲಾ ಸಂಗ್ರಹಾಲಯದ ಸ್ಥಾಪನೆ,

(xiv) ಮಕ್ಕಳಿಗಾಗಿ ಬೆಂಗಳೂರಿನಲ್ಲಿ ಬೊಂಬೆ ಸಂಗ್ರಹಾಲಯದ ಸ್ಥಾಪನೆ.

(xv) ಬನ್ನೇರುಘಟ್ಟ ರಾಷ್ಟ್ರೀಯ ಅಭಯಾರಣ್ಯದ ಅಭಿವೃದ್ಧಿಗಾಗಿ ೨೫ ಲಕ್ಷ ರೂಪಾಯಿಗಳ ಏರ್ಪಾಟು.

(xvi) ಕೇಂದ್ರ ಪುರಸ್ಕೃತ ಹೊಸ ಯೋಜನೆಯ ಮೇರೆಗೆ ತಾಳೆ ಎಣ್ಣೆ ಅಭಿವೃದ್ಧಿಯ ಬಗ್ಗೆ ಪ್ರಾಯೋಗಿಕ ಯೋಜನೆ.

(xvii) ಡಚ್ ನೆರವಿನೊಂದಿಗೆ ಕರ್ನಾಟಕದಲ್ಲಿ ಅಣಬೆ ಸಾಗುವಳಿ ಯೋಜನೆಯನ್ನು ಕೈಗೊಳ್ಳುವುದು.

(xviii) ನವದೆಹಲಿಯ ಅಖಿಲ ಭಾರತ ಅನುಸೂಚಿತ ಜಾತಿ ಸಹಕಾರ ಅಭಿವೃದ್ಧಿ ನಿಗಮದಿಂದ ಕಾರ್ಯಗತಗೊಳಿಸಲಾಗುವ ಬೆಂಗಳೂರು ಜಿಲ್ಲೆಯಲ್ಲಿರುವ ಹಣ್ಣು, ಹೂವು ಮತ್ತು ತರಕಾರಿ ರಫ್ತು ಯೋಜನೆಗಳನ್ನು ಇನ್ನೂ ಎರಡು ಜಿಲ್ಲೆಗಳಿಗೆ ವಿಸ್ತರಿಸುವುದು.

(xix) ನವದೆಹಲಿಯಲ್ಲಿರುವ ಮಾತೃ ಡೈರಿ ಘಟಕದ ಮಾದರಿಯಲ್ಲಿ ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನೊಂದಿಗೆ ಬೃಹತ್ ಶೈತ್ಯಾಗಾರದ ಸ್ಥಾಪನೆ.

(xx) ಮೊಟ್ಟೆ ಮಾರುಕಟ್ಟೆ ಮಂಡಲಿಯ ಸ್ಥಾಪನೆ.

(xxi) ಬಡ ಬೆಸ್ತರಿಗಾಗಿ ವಿಶೇಷ ವಿಮಾ ಯೋಜನೆ.

(xxii) ವಾಯು ಮಾಲಿನ್ಯ, (ಶ್ರೀ ಕೆ. ಬಿ, ಶಾಣಪ್ಪ.—ಇಲ್ಲಿ ಗುಲ್ಬರ್ಗ ಜಿಲ್ಲೆಯನ್ನು ಏತಕ್ಕೆ ಸೇರಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.— ಗುಲ್ಬರ್ಗ ನಗರಕ್ಕೆ ಬದಲು ಷಹಾಬಾದ್ ನಗರಕ್ಕೆ ಬೇಕಾದರೆ ಇದನ್ನು ವಿಸ್ತರಣೆ ಮಾಡಬಹುದು.) ನಿಯಂತ್ರಣ ಯೋಜನೆಯನ್ನು ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಬೆಳಗಾವಿ ನಗರಗಳಿಗೆ ವಿಸ್ತರಿಸುವುದು.

(xxiii) ಏಷಿಯನ್ ಅಭಿವೃದ್ಧಿ ಬ್ಯಾಂಕಿಗೆ ಸಲ್ಲಿಸುವುದಕ್ಕಾಗಿ ಬಳ್ಳಾರಿ–ಕಾರವಾರ ರಸ್ತೆಯ ಸಮೀಕ್ಷಾ ವರದಿಯ ತಯಾರಿಕೆ. ಇದಕ್ಕಾಗಿ ೫೦ ಲಕ್ಷ ರೂಪಾಯಿಗಳ ಏರ್ಪಾಟನ್ನು ಮಾಡಲಾಗುತ್ತಿದೆ.

(xxiv) ಬೆಂಗಳೂರು ರೇಸ್‌ಕೋರ್ಸನ್ನು ಸ್ಥಳಾಂತರಿಸುವುದು ಮತ್ತು ರೇಸ್ ಕೋರ್ಸ್ ಮೈದಾನವನ್ನು ಮಕ್ಕಳ ಉದ್ಯಾನವನವನ್ನಾಗಿ ಅಭಿವೃದ್ಧಿ ಪಡಿಸುವುದು.

(xxv) ವಾಣಿಜ್ಯ ತೆರಿಗೆಗಳ ಇಲಾಖೆಯು ಪ್ರಶಾಸಿಸುವ ತೆರಿಗೆ ಪರಿನಿಯಮಗಳಿಂದ ಉಂಟಾಗುವ ಎಲ್ಲಾ ವಿವಾದಗಳನ್ನು ನಿರ್ಧರಿಸಲು ಒಂದು ಪ್ರತ್ಯೇಕ ನ್ಯಾಯಾಧೀಕರಣವನ್ನು ರಚಿಸಲು ಉದ್ದೇಶಿಸಲಾಗಿದೆ. ಮತ್ತು,

(xxvi) ೧೯೮೮-೮೯ರ ಅವಧಿಯಲ್ಲಿ ಹೊಸಪೇಟೆ, ಅರಸೀಕೆರೆ, ಕೊಪ್ಪಳ, ಕುಮಟಾ, ಹೊನ್ನಾವರ ಮತ್ತು ನರಗುಂದಗಳಲ್ಲಿ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗುವುದು.

(xxvii) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಬಡ ರೋಗಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ಪಡೆಯುವಂತಾಗಲು ಅವರಿಗೆ ಆರೋಗ್ಯ ಕಾರ್ಡುಗಳನ್ನು ನೀಡಲಾಗುವುದು. ಈ ಕಾರ್ಡುಗಳನ್ನು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರದ ಕುಟುಂಬಗಳಿಗೆ ಮಾತ್ರ ನೀಡಲಾಗುವುದು.

(xxviii) ಹಳೆಯ ವಿಶ್ವವಿದ್ಯಾನಿಲಯಗಳಿಗೆ ನೀಡಲಾಗುತ್ತಿದ್ದ ಅನುದಾನಗಳನ್ನು ಪ್ರಸಕ್ತ ಹಂತದಲ್ಲಿ ಸ್ಥಗಿತಗೊಳಿಸಲಾಗುವುದು ಮತ್ತು ಅದರಿಂದ ಆಗುವ ಉಳಿತಾಯಗಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಗುವುದು. ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ಸ್ನಾತಕೋತ್ತರ ಹಂತದಲ್ಲಿ ಎಲ್ಲ ವಿಷಯಗಳಲ್ಲೂ ಪ್ರವೇಶ ಪರೀಕ್ಷೆಯನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಶಿಕ್ಷಣದ ಗುಣಮಟ್ಟವನ್ನು ಎಲ್ಲಾ ಹಂತಗಳಲ್ಲೂ ಸುಧಾರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(xxix) ತಾಳಿಭಾಗ್ಯ ಯೋಜನೆಯನ್ನು ನಿಲ್ಲಿಸಿ.

(ಶ್ರೀ ಎಸ್. ಬಂಗಾರಪ್ಪ.—ಈಗ ಈ ಯೋಜನೆ ಅಡಿಯಲ್ಲಿ ಮದುವೆ ಆದವರಿಗೆ ತೊಟ್ಟಿಲು ಮತ್ತು ಸೈಟುಗಳನ್ನು ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಸಲಹೆ ಮತ್ತು ಸೂಚನೆಗಳನ್ನು ತೆಗೆದುಕೊಂಡು ಈ ಬಗ್ಗೆ ನಿರ್ಧಾರ ಮಾಡುತ್ತೇವೆ.

ಅಧ್ಯಕ್ಷರು.—ನಾಳೆ ಇದರ ಮೇಲೆ ಮಾತನಾಡುವವರು ಮಾತನಾಡಬಹುದು), ಅದಕ್ಕೆ ಬದಲಾಗಿ ಬಡವರ ಅನುಕೂಲಕ್ಕಾಗಿ ಬಡಜನರು ಸಂಸಾರ ಹೂಡಲು ಸಾಧ್ಯವಾಗುವಂಥ ಮತ್ತೊಂದು ಯೋಜನೆಯನ್ನು ಆರಂಭಿಸಬಯಸುತ್ತೇನೆ.

(xxx) ಪ್ರಸಕ್ತ ವರ್ಷದಲ್ಲಿ ಹಸಿರು ಕಾರ್ಡು ಯೋಜನೆಯನ್ನು ನಗರದ ಬಡಜನರಿಗೆ ವಿಸ್ತರಿಸಲ ಉದ್ದೇಶಿಸಿದ್ದೇನೆ,

(xxxi) ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯ ಕಾರ್ಯಾಚರಣೆಯನ್ನು ವ್ಯಾಪಕ ಕಾರ್ಯಕ್ರಮವನ್ನಾಗಿ ಮಾಡಲು ಅದನ್ನು ಶಿಕ್ಷಣದೊಂದಿಗೆ ಸಂಯೋಜಿಸಲಾಗುವುದು

(xxxii) ನಗರ ಪರಿಮಿತಿಗಳಲ್ಲಿ ಇರುವ ಶಾಲೆಗಳನ್ನು ಜಿಲ್ಲಾ ಪರಿಷತ್ತುಗಳು ನಿರ್ಲಕ್ಷಿಸುತ್ತಿವೆ ಎಂಬುದಾಗಿ ಸರ್ಕಾರಕ್ಕೆ ದೂರು ಬಂದಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ಸೂಕ್ತ ಪರಿಹಾರ ಕ್ರಮವನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆ.

(xxxiii) ಸ್ಟೈಪೆಂಡರಿ ಪದವೀಧರರಿಗೆ ಸಂದಾಯ ಮಾಡುವ ಸ್ಟೈಪೆಂಡ್ ಮೊತ್ತವನ್ನು ೧-೪-೧೯೮೮ರಿಂದ ಪ್ರತಿ ತಿಂಗಳಿಗೆ ೫೦ ರೂಪಾಯಿಯಷ್ಟು ಹೆಚ್ಚಿಸಲಾಗುವುದು.

(xxxiv) ಅಂಕೋಲಾದಲ್ಲಿ ಸತ್ಯಾಗ್ರಹ ಸೌಧವನ್ನು ನಿರ್ಮಿಸುವುದು.

(xxxv) ಪೋಲೀಸ್ ಆಯೋಗದ ಶಿಫಾರಸ್ಸುಗಳ ಮೇರೆಗೆ, ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕಡಿಮೆ ದರಗಳಲ್ಲಿ ಅತ್ಯವಶ್ಯ ದಿನಸಿಗಳ ಸರಬರಾಜು.

ತೆರಿಗೆ ನಿರ್ಧಾರಣೆ

೩೩. ಕೇಂದ್ರ ಸರ್ಕಾರವು ವಿಧಿಸಿದ ವಿವಿಧ ತೆರಿಗೆಗಳ ಪರಿಣಾಮಗಳನ್ನು ಗಮನಿಸಿ ನೋಡುವುದು ಅವಶ್ಯವಾಗಿರುವುದರಿಂದ, ನಗರ ಪ್ರದೇಶಗಳ ಖಾಲಿ ಜಮೀನು ತೆರಿಗೆಯನ್ನು ಹೊರತುಪಡಿಸಿ, ಈ ಬಜೆಟ್‌ನಲ್ಲಿ ನಾನು ಯಾವುದೇ ಹೊಸ ತೆರಿಗೆಯನ್ನು ವಿಧಿಸಲು ಉದ್ದೇಶಿಸಿಲ್ಲ. ಜನಸಾಮಾನ್ಯರ ತೆರಿಗೆ ಭಾರವನ್ನು ಹೆಚ್ಚಿಸಲು ಬಯಸುವುದಿಲ್ಲ. ಇದಕ್ಕೆ ಪ್ರತಿಯಾಗಿ, ಸುವ್ಯವಸ್ಥಿತ ಮತ್ತು ಪರಿಹಾರ ಕ್ರಮಗಳ ಮೂಲಕ ಜನಸಾಮಾನ್ಯರ ಮೇಲೆ ಈಗಿರುವ ಹೊರೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಇಳಿಸಲು ಪ್ರಯತ್ನಿಸಿದ್ದೇನೆ.

ಮಾರಾಟ ತೆರಿಗೆ

೩೪. (i) ಅನುಬಂಧ-XIVರಲ್ಲಿ ಪಟ್ಟಿ ಮಾಡಿದ ಸರಕುಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

(ii) ಅನುಬಂಧ-XVರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ಮಾರಾಟ ತೆರಿಗೆ ದರಗಳನ್ನು ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

(iii) ಈಗ ಎರಡು ಹಂತಗಳಲ್ಲಿ, ಎಂದರೆ ಮೊದಲನೆ ಮತ್ತು ಕೊನೆಯ ಮಾರಾಟದ ಹಂತಗಳಲ್ಲಿ ತೆರಿಗೆ ವಿಧಿಸಲಾಗುತ್ತಿರುವಂಥ, ಅನುಬಂಧ-XVIರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲಿನ ತೆರಿಗೆಯನ್ನು ಮೊದಲನೆ ಮಾರಾಟ ಹಂತಕ್ಕೆ ಅನ್ವಯಿಸುವ ತೆರಿಗೆ ದರದೊಂದಿಗೆ ಕೊನೆಯ ಮಾರಾಟ ಹಂತಕ್ಕೆ ಅನ್ವಯಿಸುವ ತೆರಿಗೆ ದರವನ್ನು ವಿಲೀನಗೊಳಿಸಿ, ಏಕ ಹಂತದಲ್ಲಿ ತೆರಿಗೆ ವಿಧಿಸಲು ಮಾರ್ಪಾಡು ಮಾಡಲಾಗುವುದು.

(iv) ಮೊದಲ ಮಾರಾಟ ಹಂತದಲ್ಲಿ ಶೇಕಡಾ ೯ರ ಏಕ ಹಂತದ ಸಾಮಾನ್ಯ ದರದಲ್ಲಿ ಅನುಬಂಧ-XVIIರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ತೆರಿಗೆ ವಿಧಿಸಲು ಪ್ರಸ್ತಾವಿಸಲಾಗಿದೆ.

(v) ಅನುಬಂಧ-XVIIIರಲ್ಲಿ ಪಟ್ಟಿ ಮಾಡಿದ ಸರಕುಗಳ ಸಂಬಂಧದಲ್ಲಿ ತೆರಿಗೆ ವಿಧಿಸುವ ಹಂತವನ್ನು ಬಹು ಹಂತದಿಂದ ಏಕ ಹಂತಕ್ಕೆ ವರ್ಗಾಯಿಸಲಾಗಿದೆ. ಸೂಚಿಸಿದ ದರಗಳನ್ನು ಕೂಡಾ ಈ ಅನುಬಂಧದಲ್ಲಿ ಕೊಡಲಾಗಿದೆ.

೩೫. ಕರ್ನಾಟಕ ಉಚ್ಚ ನ್ಯಾಯಾಲಯದ ಅಭಿಪ್ರಾಯಗಳನ್ನು ಗಮನದಲ್ಲಿರಿಸಿ ವ್ಯಾಪಾರಿಗಳು ತಮ್ಮ ಲೆಕ್ಕಪತ್ರಗಳನ್ನು ೧೯೮೮ರ ಮಾರ್ಚ್, ೩೧ರಂದು ಮುಕ್ತಾಯ ಮಾಡಲು ಅಗತ್ಯಪಡಿಸುವಂತೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ೧೯೫೭ರ ೪೩ನೇ ಪ್ರಕರಣಕ್ಕೆ ಸೂಕ್ತ ತಿದ್ದುಪಡಿಯನ್ನು ತರಲು ಪ್ರಸ್ತಾವಿಸಲಾಗಿದೆ. ಈ ವರ್ಷವೇ ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು

ಜಾರಿಗೊಳಿಸಬೇಕೆಂದಿದ್ದೆವು. ಆದರೆ ವರ್ತಕ ಸಂಘದವರು ಮುಂದಿನ ವರ್ಷದಿಂದ ಇದನ್ನು ಜಾರಿಗೆ ತರಬೇಕೆಂದು ಕೇಳಿಕೊಂಡಿದ್ದರಿಂದ ಇದನ್ನು ಜಾರಿಗೆ ತರುವುದು ತಡವಾಯಿತು.

೩೬. ಈಗ ವಿವಿಧ ತೆರಿಗೆ-ನಿರ್ಧರಣೆ-ಪ್ರಾಧಿಕಾರಗಳಲ್ಲಿ ನಿಹಿತವಾಗಿರುವ ನೋಂದಣಿ ಅಧಿಕಾರವನ್ನು ಏಕ ಪ್ರಾಧಿಕಾರದಲ್ಲಿ ಎಂದರೆ, ನೋಂದಣಿಯನ್ನು ಕೋರುವ ವ್ಯಾಪಾರಿಯು ವ್ಯವಹಾರವನ್ನು ನಡೆಸುತ್ತಿರುವಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ವಾಣಿಜ್ಯ ತೆರಿಗೆ ಅಧಿಕಾರಿಯಲ್ಲಿ ನಿಹಿತಗೊಳಿಸಬೇಕೆಂದು ಪ್ರಸ್ತಾವಿಸಲಾಗಿದೆ.

೩೭. ತೆರಿಗೆ ಅಥವಾ ಮೊದಲನೆ ಅಪೀಲು ಪ್ರಾಧಿಕಾರದ ಆದೇಶಗಳಿಂದ ಉದ್ಭವಿಸುವ ಜುಲ್ಮಾನೆಗಳನ್ನು ವಸೂಲು ಮಾಡುವುದಕ್ಕೆ ತಡೆ ನೀಡುವ ಕರ್ನಾಟಕ ಅಪೀಲು ನ್ಯಾಯಾಧೀಕರಣದ ಅಧಿಕಾರವನ್ನು. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ೧೯೫೭ರ ಮತ್ತು ಕರ್ನಾಟಕ ಅಪೀಲು ನ್ಯಾಯಾಧೀಕರಣ ಅಧಿನಿಯಮದ ಉಪಬಂಧಗಳನ್ನು ತಿದ್ದುಪಡಿ ಮಾಡಿ, ತೆಗೆದುಹಾಕಲು ಉದ್ದೇಶಿಸಲಾಗಿದೆ. ತೆರಿಗೆ ವಸೂಲಾತಿಯನ್ನು ಸುನಿಶ್ಚಿತಪಡಿಸಿಕೊಳ್ಳಲು ಈ ತಿದ್ದುಪಡಿಗಳನ್ನು ಮಾಡಲಾಗುತ್ತಿದೆ.

೩೮. ಯಾವುದೇ ತ್ರೈಮಾಸಿಕದ ಅವಧಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ತಪ್ಪುವ ಸಣ್ಣ ಔದ್ಯಮಿಕ ಘಟಕಗಳು ಆ ತರುವಾಯ ತ್ರೈಮಾಸಿಕವಾಗಿ ತೆರಿಗೆಯನ್ನು ಸಂದಾಯ ಮಾಡುವ ಸೌಲಭ್ಯಕ್ಕೆ ಅನರ್ಹವಾಗುವಂತೆ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಈ ಬಗ್ಗೆ ದುರುಪಯೋಗವಾಗುವುದು ನಮಗೆ ಕಂಡುಬಂತು. ಅದಕ್ಕಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿರುವ ಕೆಲವು ಕನ್ನಡ ಪದಗಳು ನನಗೆ ಅರ್ಥವಾಗುತ್ತಿಲ್ಲದ್ದರಿಂದ ತೆರಿಗೆ ನಿರ್ಧರಣೆಗೆ ಸಂಬಂಧಪಟ್ಟ ಇನ್ನಿತರ ವಿಷಯಗಳನ್ನು ಇಂಗ್ಲೀಷ್ ಭಾಷೆಯಲ್ಲಿಯೇ ಓದುತ್ತೇನೆ.

